ಶ್ರೀ ಜಿ. ವಿ. ಅಂಜನಪ್ಪ.—ಸ್ಟೂಡೆಂಟ್ಸ್ ಹೋಂಗೆ ನಾನ್‌ಪ್ಲಾನ್ ಬಜೆಟ್ಟಿನಲ್ಲಿ 5 ಲಕ್ಷ ರೂಪಾಯಿ ಕೊಡಲಾಗಿದೆ. ಅದರ ವಿವರವೇನು ? ಎಲ್ಲಿ ಕಟ್ಟುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಕಬ್ಬನ್ ಪಾರ್ಕಿನಲ್ಲಿ ರಿಸರ್ವ್ ಬ್ಯಾಂಕ್ ಬಿಲ್ಡಿಂಗ್‌ಗೂ ನ್ಯೂ ಪಬ್ಲಿಕ್ ಆಫೀಸ್ ಬಿಲ್ಡಿಂಗಿಗೂ ಮಧ್ಯೆಇರುವ ಜಾಗದಲ್ಲಿ ಸ್ಟೂಡೆಂಟ್ಸ್ ಹೋಂ ಕಟ್ಟಬೇಕೆಂದಿದೆ.

ಶ್ರೀ ಎಸ್. ಪಿ. ರಾಜಣ್ಣ.—ನಿನ್ನೆ ಉತ್ತರ ಕೊಟ್ಟಿರುವುದಕ್ಕೂ ಅಂದರೆ ವಿದ್ಯಾ ಇರಾಖೆಗೆ ಸಂಬಂಧಪಟ್ಟಹಾಗೆ ಹೇಳಿದ ಉತ್ತರಕ್ಕೂ ಇಂದು ಕೊಟ್ಟಿರುವ ಉತ್ತರಕ್ಕೂ ವ್ಯತ್ಯಾಸವಿದೆ ಇದರಲ್ಲಿ ಯಾವುದು ಸರಿ ?

ಶ್ರೀ ರಾಮಕೃಷ್ಣ ಹೆಗಡೆ.—ನಿನ್ನೆ ಏನು ಉತ್ತರ ಕೊಟ್ಟರೆಂಬುದು ನನ್ನೆದುರಿಗಿಲ್ಲ. ಆಟ ಪಾಟಗಳಿಗೆ ಸಾಕಷ್ಟು ಅನುಕೂಲ ಮಾಡಿಕೊಡದಿದ್ದರೆ ಯುವಕರ ಅಹಿತಕರ ಚಟುವಟಿಕೆಗಳಿಗೆ ಅವಕಾಶವಾಗುವುದು. ಅವರು ಯಾವಾಗಲೂ ಓದುವುದಕ್ಕಾಗುವುದಿಲ್ಲ, ಸ್ವಲ್ಪ ಮನರಂಜನೆ ಬೇಕು. ಸರಿಯಾದ ದಾರಿಯನ್ನು ತೋರಿಸದಿದ್ದರೆ ಕೆಟ್ಟ ದಾರಿಯನ್ನು ಹಿಡಿಯುವರು.

ಶ್ರೀ ಎ. ಎಚ್. ಶಿವಾನಂದಸ್ವಾಮಿ. —ನಾನ್‌ಪ್ಲಾನ್ ಬಜೆಟ್ಟಿನಲ್ಲಿ 73 ಲಕ್ಷ ಚಿಲ್ಲರೆ ಎನ್.ಸಿ.ಸಿ.ಗೆ ರಿಸರ್ವ್ ಮಾಡಿದ್ದೀರಿ. ಅದನ್ನು ಪ್ಲಾನ್ ಬಜೆಟ್ಟಿನಲ್ಲಿ ಸೇರಿಸುವುದಕ್ಕೆ ಅವಕಾಶ ವಾಗುವಂತೆ ಕೇಂದ್ರ ಸರಕಾರಕ್ಕೆ ಬರೆದು ಹಳ್ಳಿಗಳಲ್ಲಿರುವ ಯುವಕರಿಗೆ ಅನುಕೂಲ ಮಾಡಿಕೊಡು ವುದಕ್ಕಾಗುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ರೆಕರಿಂಗ್ ಎಕ್ಸ್‌ಪೆಂಡಿಚರ್, ಪ್ಲಾನ್‌ನಲ್ಲಿ ಸೇರಿಸು ವುದಕ್ಕಾಗುವುದಿಲ್ಲ.

Peripatetic Dramatic Troupes in the State

19. Sri K. SURYANARAYANA ADIGA (Local Authorities' Constituency).—

Will the Minister for Education be pleased to state :—

(*a*) the number of professional peripatetic dramatic torupes functioning in the State ;

(*b*) whether the Government is aware that these dramatic troupes were responsible for building up in the past a very high tradition for the Kannada stage ;

(*c*) whether it has come to the notice of Government that most of these troupes even now, are trying to continue the past tradition and providing educative recreation to the public ;

(*d*) whether it has come to the notice of Government that on the face of the Competition from the cinema most of these dramatic troupes are finding it difficult to survive ;

(*e*) if so, whether Government has any proposal to see that these dramatic troupes and artistes, are nursed, wherever and whenever necessary, with financial aid from the State with a view to encourage and preserve the dramatic art ;

(*f*) whether the Government has been giving any financial aid to dramatic troupes or artistes ?

Sri N. M. KOTRABASAIAH SOGI (Deputy Minister for Education).—

(*a*) Nine.

(*b*) Yes.

(*c*) Yes.

(*d*) Yes, in cities and towns where cinemas exist.

(*e*) The matter is under examination.

(*f*) Financial aid to artistes in old age and indigent circumstances is being given.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ರಾಜ್ಯದಲ್ಲಿ ಇರುವ ಸಂಚಾರಿ ನಾಟಕ ಮಂಡಲಿಗಳು ಯಾವುವು ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಶಾರದ ಸಂಗೀತ ನಾಟಕ ಮಂಡಲಿ, ಚನ್ನ ಬಸವೇಶ್ವರ ನಾಟಕ ಮಂಡಲಿ—ಗುಬ್ಬಿ, ಹಿರಣ್ಣಯ್ಯ ಮಿತ್ರ ಮಂಡಲಿ, ಕಲಾ ವೈಭವ ಮಂಡಲಿ, ಶ್ರೀ ನಾಟಕ ಮಂಡಲಿ—ಬೆಂಗಳೂರು, ಕುಮಾರ ವಿಜಯ ನಾಟಕ ಮಂಡಲಿ—ಚಿತ್ರದುರ್ಗ, ಹೊನ್ನಪ್ಪ ಭಾಗವತರ ನಾಟಕ ಮಂಡಲಿ, ಶ್ರೀಕಂಠೇಶ್ವರ ನಾಟಕ ಮಂಡಲಿ—ಮೈಸೂರು ಮುಂತಾದುವು.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸಿನೀಮಾಗಳಿಗೆ 50 ಸಾವಿರ ರೂಪಾಯಿ ಸರಕಾರ ಕೊಡುವಂತೆ ಆ ಹಿನ್ನೆಲೆಯಲ್ಲೇ ಒಳ್ಳೆಯ ನಾಟಕ ಮಂಡಲಿಗಳಿಗೆ ಧನ ಸಹಾಯ ಕೊಡುವ ಯೋಚನೆ ಸರಕಾರದಲ್ಲಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ವಿಚಾರ ಸರಕಾರದಲ್ಲಿದೆ. ಆದರೆ ಈಗ ತತ್ಕಾಲದಲ್ಲಿ ಸಂಗೀತ-ನಾಟಕ ಅಕ್ಯಾಡಮಿ ಸಹಾಯ ನೀಡುತ್ತಿದೆ. ನಾಟಕ ಸಂಸ್ಥೆಗಳಲ್ಲಿ ಹೆಚ್ಚು ಖಾಸಗಿ ಸಂಸ್ಥೆಗಳಿರುವುದರಿಂದ ಅವು ಸರಕಾರದ ಸಹಾಯ ಪಡೆಯಬೇಕಾದರೆ ರಿಜಿಸ್ಟರ್ ಮಾಡಿರ ಬೇಕು. ನರಿಯಾದವರ ಮಾಲೀಕತ್ವದಲ್ಲಿರಬೇಕು, ಸಾರ್ವಜನಿಕರಿಂದ ಮನ್ನಣೆ ಪಡೆಯುವಂತಿರ ಬೇಕು. ಆದುದರಿಂದ ಸಹಾಯ ಮಾಡುವುದು ಕಷ್ಟ. ಆದರೂ ಕೂಡ ಸಹಾಯ ಈಗ ಕೆಲಮಟ್ಟಿಗೆ ದೊರೆಯುತ್ತಿದೆ.

ಶ್ರೀ ಜಿ. ವಿ. ಗೌಡ.—ಈ ಅಕ್ಯಾಡಮಿ ಅವರು ಉತ್ತಮ ಕಲಾವಿದರಿಗೆ ಸಹಾಯವನ್ನು ಒದಗಿಸುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂತಹ ಯಾವ ಆರೋಪವೂ ಬಂದಿಲ್ಲ. ನಾಟಕ ಕಲೆಯಲ್ಲ ಪರಿಣತರಾದವರಿಗೆ, ಕಲಾವಿದರಿಗೆ ಅಮೆಚ್ಯೂರ್ ನಾಟಕ ಕಂಪೆನಿಗಳಿಗೆ ಸಹಾಯ ನೀಡುತ್ತಾ ಇದ್ದಾರೆ, ಅದಕ್ಕೆ 3 ಲಕ್ಷ ರೂಪಾಯಿ ನಿಗಧಿ ಮಾಡಲಾಗಿದೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಈ ನಾಟಕದ ಕಂಪನಿಗಳಿಗೆ ಧನ ಸಹಾಯ ಮಾಡುವಂತಹ ಅಗತ್ಯತೆಯನ್ನು ಮಂತ್ರಿಮಂಡಲದ ಮೇಲೆ ತರುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಬಗ್ಗೆ ಮೊನ್ನೆ ಇದೇ ಸದನದಲ್ಲಿ ಸಾಕಾದಷ್ಟು ಚರ್ಚೆಯಾಗಿದೆ. ಚಲನ ಚಿತ್ರಗಳಿಗೆ ಕೊಟ್ಟಂತೆ ನಾಟಕ ಕಂಪೆನಿಗಳಿಗೂ ಸಹಾಯ ಮಾಡತಕ್ಕದ್ದು ಹೇಗೆ ಅಂತ ವಿಚಾರ ಮಾಡಿ ಸಾಧ್ಯವಿದ್ದರೆ ಆ ಒಂದು ಸಹಾಯವನ್ನು ಮಾಡಬೇಕೆಂಬುದು ಮಂತ್ರಿಮಂಡಲದ ಪರಿಶೀಲನೆಯಲ್ಲಿದೆ. ಅದಕ್ಕೆ ಮಂತ್ರಿಮಂಡಲದ ಒಪ್ಪಿಗೆ ದೊರೆತು, ಹಣಕಾಸಿನ ಖಾತೆಯ ಒಪ್ಪಿಗೆ ದೊರೆತ ಕೂಡಲೇ ಆ ಒಂದು ಯೋಜನೆಯನ್ನು ಜಾರಿಗೆ ತರಲು ಪ್ರಯತ್ನ ಪಡುತ್ತೇವೆ.

ಶ್ರೀ ಜಿ. ವಿ. ಪಂಜನಪ್ಪ.—ಮೈಸೂರು ರಾಜ್ಯದಲ್ಲಿ ಎಷ್ಟು ಜನ ನಟರುಗಳಿಗೆ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಾಗಲೇ ಸುಮಾರು 150ಕ್ಕೂ ಮೇಲ್ಪಟ್ಟು ಅಂತಹ ಕಲಾವಿದರಿಗೆ ಮಾಸಾಶನ ಕೊಡುತ್ತ ಇದ್ದೇವೆ. ಅಲ್ಲದೆ ಸಂಗೀತ ನಾಟಕ ಅಕಾಡೆಮಿಯವರು ಪ್ರತಿ ವರ್ಷ, ವರ್ಷಕ್ಕೆ ಹತ್ತು ಜನರಂತೆ ಈಗಾಗಲೇ 6-7 ವರ್ಷಗಳಿಂದ ಅವರಿಗೆ ಪ್ರಶಸ್ತಿಗಳನ್ನು ನೀಡುತ್ತಾ ಇದ್ದಾರೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈ ನಾಟಕ ಕಂಪೆನಿಗಳು ಪ್ರತಿ ವರ್ಷ ಒಂದೊಂದಾಗಿ ದಿವಾಳಿತನದಿಂದ ಹೊರಗುಳಿಯುತ್ತಾ ಇವೆ. ಅದರ ಬಗ್ಗೆ ಏನಾದರೂ ಅಂಕಿ ಅಂಶ ಇಟ್ಟುಕೊಂಡಿದ್ದೀರಾ? ಮತ್ತು ಈ ನಾಟಕ ಕಂಪೆನಿಗಳು ಕಲಾವಿದರನ್ನು ತರಬೇತು ಮಾಡಕಕ್ಕೆ ಕೇಂದ್ರಗಳಾಗಿರುವುದರಿಂದ ಕೊನೆ ಪಕ್ಷ ನೂರು ನಾಟಕಗಳನ್ನು ಬೇರೆ ಬೇರೆ ಕಡೆ 25 ಸ್ಥಳಗಳಲ್ಲಿ ಪ್ರದರ್ಶನ ಮಾಡಿದ್ದರೆ ಅಂತಹವರಿಗೆ ಸನಿಮಾದವರಿಗೆ ಕೊಡುವಂತ ಸಂಭಾವನೆ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಕಂಪೆನಿಯವರ ಸ್ಥಿತಿ ಕಷ್ಟವಾಗಿರುವುದು ಬರೀ ಹೊಸಕಾಸಿನ ಪರಿಸ್ಥಿತಿಯಿಂದ ಎಂದು ಹೇಳಲಕ್ಕೆ ಬರುವುದಿಲ್ಲ. ಒಳ್ಳೆಯ ನಾಟಕ ಕಂಪೆನಿಗಳು ಇವತ್ತಿಗೂ ಕೂಡ ಗಾಯನ ಮತ್ತು ನಗರವಲ್ಲೂ ಸಹ ಹೆಚ್ಚು ಜನಾಕರ್ಷಣೆಯನ್ನು ಪಡೆದಿದ್ದು ಪಡೆಯುತ್ತಾ ಇವೆ. ರಾಷ್ಟ್ರೀಯ ಮನೋಭಾವ ಬರಕಕ್ಕೆ ರಾಷ್ಟ್ರೀಯ ತತ್ವಜ್ಞಾನಿರತಕ್ಕೆ ಹರಿಜನೋದ್ಧಾರ ಮತ್ತು ಭಾವೈಕ್ಯತೆಗೆ ಸಂಬಂಧಪಟ್ಟ ವಿಷಯಗಳ ಮೇಲೆ ನಾಟಕಗಳನ್ನು ಮತ್ತು ಸ್ಕ್ರಿಪ್ಟ್‌ನ್ನು ಬರೆಸಿ ಅವನ್ನು ತಜ್ಞರಿಂದ ಪರಿಶೀಲನೆ ಮಾಡಿಸಿ ನಾಟಕ ಕಂಪೆನಿಯವರು ಆ ನಾಟಕಗಳನ್ನು ಆಡುವುದಕ್ಕೆ ಒಂದು ಅನುಕೂಲತೆ ಮಾಡಿಕೊಟ್ಟು ಯಾವ ಕಂಪೆನಿಗಳವರು ಆ ನಾಟಕಗಳನ್ನು ಆಡುತ್ತಾರೋ ಅವರಿಗೆ ಪ್ರತಿವಿನಿತ್ಯ 150 ರೂಪಾಯಿಗಳು ಮತ್ತು ಬೆಂಗಳೂರು ನಗರದಲ್ಲಿ ಆಡಿದರೆ 7 ಸಾವಿರ ರೂಪಾಯಿಗೆ ಹೆಚ್ಚಾಗದಂತೆ, ಗ್ರಾಮೀಣ ಪ್ರದೇಶದಲ್ಲಾದರೆ 5 ಸಾವಿರ ರೂಪಾಯಿಗಳಿಗೆ ಹೆಚ್ಚಾಗದಂತೆ ಸಹಾಯ ಮಾಡಬೇಕೆಂಬ ಒಂದು ಯೋಜನೆ ಸಿದ್ಧವಾಗಿದೆ, ಅದು ಮಂತ್ರಿಮಂಡಲದ ಪರಿಶೀಲನೆಯಲ್ಲಿ ಇದೆ.

ಶ್ರೀ ಬಸವರಾಜ ಕಟ್ಟೀಮನೆ.—ಸುರಾಮ್ಯತ ಮತ್ತು ಅಧ್ಯಾರಾಮ್ಯತ ಇವುಗಳನ್ನು ಸೇವೆ ಮಾಡಿ ತರುಣರು ತಮ್ಮ ತಾರುಣ್ಯದಲ್ಲಯೇ ಮುಪ್ಪಾದವರಿಗೂ ನಿವೃತ್ತಿ ವೇತನ ಅಥವಾ ಸಹಾಯ ಮಾಡತಕ್ಕ ಅಂಶವನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಕೆ. ಚನ್ನಬಸವನಗೌಡ.—ಹಿಂದೆ ಬಯಲಾಟ ಮತ್ತು ದೊಡ್ಡಾಟ ಇವುಗಳಿಗೆ ಆ ಸಂಸ್ಥೆಯ ಪ್ರಚಾರ ಇಲಾಖೆಯವರು ಸಹಾಯ ಧನವನ್ನು ಹಳ್ಳಿಹಳ್ಳಿಗೂ ನೀಡುತ್ತಿದ್ದರು. ಈಗಲೂ ಅದೇ ರೀತಿ ಸಹಾಯವನ್ನು ಕೊಡತಕದ್ದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರದವರು ಈಗ ಯಕ್ಷಗಾನ, ಬಯಲಾಟ ಇತ್ಯಾದಿ ಎಲ್ಲಾ ಕಲೆಗಾರರನ್ನೂ ಸೇರಿಸಿ ಒಂದು ಸ್ವಧರ್ಯನ್ನು ಏರ್ಪಡಿಸಿದ್ದಾರೆ. ಅದರಲ್ಲಿ ವಿಜಯಶಾಲಿಗಳಾದವರಿಗೆ ಬಹುಮಾನ ವಿತರಣೆಯನ್ನು ಮಾಡತಕ್ಕ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ.

SHORT NOTICE QUESTIONS AND ANSWERS

Closure of Siddeswara Textile Mills, Davangere

7. Sri A. H. SHIVANANDASWAMY (Elected by L. A.).—

Will the Minister for Law, Labour and Parliamentary Affairs be pleased to state :—

(a) whether it is a fact that Sree Siddeswara Textile Mills (Private) Limited, Davangere has been closed down recently due to Labour trouble ;